ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ : ಮಾನ್ಯ ಉಪಾಧ್ಯಕ್ಷರೆ, ಸಮಾಜ ಕಲ್ಯಾಣ ಇಲಾಖೆ ಮಂತ್ರಿಗಳು ಇಲ್ಲ ಎಂದರೆ ಈ ಸಮಾಜದ ಬಗ್ಗೆ ಗೌರವ ಕೂಡ ಇಲ್ಲ. ಅವರಿಗೆ ರಕ್ಷಣೆನೂ ಇಲ್ಲ.

ಉಪಾಧ್ಯಕ್ಷರು : ಕರೆಸೋಣ, ಎಲ್ಲರಿಗೂ ಪ್ರಶ್ನೆಗೆ ಉತ್ತರ ಕೊಡಿಸೋಣ.

ಶ್ರೀ ಸಿ.ಎಸ್. ನಾಡಗೌಡ : ಮಾನ್ಯ ಉಪಾಧ್ಯಕ್ಷರೆ, ಅವರ ಪರವಾಗಿ ಮಾನ್ಯ ಕಾಗೋಡು ತಿಮ್ಮಪ್ಪನವರು ಉತ್ತರ ಕೊಡುತ್ತಾರೆ.

ಉಪಾಧ್ಯಕ್ಷರು : ಅವರೂ ಇಲ್ಲ.

ಶ್ರೀ ಅಪ್ಪಾಜಿ ಎಸ್. ನಾಡಗೌಡ : ಅವರು ಬರುತ್ತಾರೆ.

ಕುಮಟಾ ತಾಲ್ಲೂಕಿನಲ್ಲಿ ಮತ್ಸ್ಯಾಶ್ರಯ ಯೋಜನೆ

615 (5371) : ಶ್ರೀ ಮೋಹನ್ ಕೆ. ಶೆಟ್ಟಿ (ಕುಮಟ) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುಮಟಾ ವಿಧಾನ ಸಭಾ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯ ಮೀನುಗಾರರಿದ್ದು, ಅವರಿಗೆ ಮತ್ಸ್ಯಾಶ್ರಯ ಯೋಜನೆಯಡಿ ಮಂಜೂರು ಮಾಡಿರುವ ಮನೆಗಳ ಸಂಖ್ಯೆ ಬಹಳ ಕಡಿಮೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪ್ರಸ್ತುತ ಮಂಜೂರು ಮಾಡಿರುವ ಮನೆಗಳು ಅತೀ ಕಡಿಮೆ ಸಂಖ್ಯೆಯಲ್ಲಿದ್ದು, ಉಳಿದ ಮೀನುಗಾರರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮನೆಗಳನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ವಸಂತ್ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು)

ಅ) ಇಲ್ಲಿಯವರೆವಿಗೂ ಕುಮಟಾ ತಾಲ್ಲೂಕಿಗೆ ಮತ್ಸ್ಯಾಶ್ರಯ ಯೋಜನೆಯಲ್ಲಿ 400 ಮನೆಗಳನ್ನು ಮಂಜೂರು ಮಾಡಲಾಗಿದೆ. ರಾಜ್ಯದ ಇತರ ಭಾಗಗಳಿಗೆ ಹೋಲಿಸಿದಲ್ಲಿ ಕುಮಟಾ ತಾಲ್ಲೂಕಿಗೆ ಯುಕ್ತವಾದಷ್ಟು ಮನೆಗಳನ್ನು ನೀಡಲಾಗಿದೆ.

ಆ) ಬೇಡಿಕೆ ಮತ್ತು ಅನುದಾನ ಲಭ್ಯತೆಗನುಗುಣವಾಗಿ ಮುಂದಿನ ವರ್ಷಗಳಲ್ಲಿ ಮನೆಗಳನ್ನು ಮಂಜೂರು ಮಾಡಲ್ಪಡಲಾಗುತ್ತದೆ.

ಶ್ರೀ ಮೋಹನ್ ಕೆ. ಶೆಟ್ಟಿ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ ಅವರು ಮತ್ಸ್ಯಾಶ್ರಯ ಯೋಜನೆಯಲ್ಲಿ 400 ಮನೆಗಳನ್ನು ಮಂಜೂರು ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಅದು ಸತ್ಯಕ್ಕೆ ದೂರವಾದುದು. ನಮ್ಮ ಸರ್ಕಾರ ಬಂದಮೇಲೆ ಕೇವಲ 90 ಮತ್ಸ್ಯಾಶ್ರಯ ಯೋಜನೆಯಲ್ಲಿ ಮನೆಗಳು ಮಂಜೂರಾಗಿವೆ. ಆದರೆ ಅದಕ್ಕೆ ಇಲ್ಲಿವರೆಗೂ ಕೂಡ ಹಣ ಬಿಡುಗಡೆಯಾಗಿಲ್ಲ. ಇನ್ನು 2ನೆಯದಾಗಿ ನನ್ನ ಕ್ಷೇತ್ರದಲ್ಲಿ ಸುಮಾರು 40 ಸಾವಿರ ಬಡ ಮೀನುಗಾರರು ಇದ್ದಾರೆ. ಈಗಾಗಲೇ ಕುಮಟಾ ತಾಲ್ಲೂಕಿನಿಂದ 1003 ಅರ್ಜಿಗಳು ಬಂದಿವೆ. ನನ್ನ ಕಡೆಯಿಂದ 400 ಅರ್ಜಿಗಳು ಬಂದಿರುವುದು ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ. ಆದುದರಿಂದ ಇದಕ್ಕೆ ಹಣ ಕೂಡಲೇ ಬಿಡುಗಡೆಯಾಗಬೇಕು. ಮತ್ತು ಅತೀ ಹೆಚ್ಚು 500 ಮನೆ ಬಿಡುಗಡೆ ಮಾಡಬೇಕೆಂದು ಹೇಳಿ ನಾನು ಇಲ್ಲಿ ಕೇಳುತ್ತಿದ್ದೇನೆ. ಹಾಗೆ ಮತ್ತೊಂದು ವಿಚಾರ ಮಾನ್ಯ ಸಚಿವರು ಹಿಂದಿನ ತಿಂಗಳು ಮಾನ್ಯ ಮುಖ್ಯಮಂತ್ರಿಗಳ ಜೊತೆ ಕರಾವಳಿಯ ಶಾಸಕರ ಸಭೆಯನ್ನು

ಕರೆದರು. ಆದರೆ ನಮ್ಮ ಉತ್ತರ ಕನ್ನಡ ಕರಾವಳಿ ಶಾಸಕರನ್ನು ಅವರು ಕರೆಯಲಿಲ್ಲ. ಏಕೆ? ಮೊನ್ನೆ ಹೊಸ ತಾಂತ್ರಿಕರೆ ಈ ಸಮುದ್ರ ಕೊರೆತದ ಬಗ್ಗೆ ವಿದೇಶಕ್ಕೆ ಸೌತ್ ಕೆನರಾದವರು ಹೋದರು. ಆಗ ಉಡುಪಿ ಜಿಲ್ಲೆಯವರು ಹೋದರು. ಅವರು ಹೋದ ಬಗ್ಗೆ ನನ್ನ ತಕರಾರು ಇಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ಬಹಳಷ್ಟು ಸಮುದ್ರ ಕೊರತೆ ಇದೆ. ಅವರನ್ನು ಏಕೆ ಕರೆದುಕೊಂಡು ಹೋಗಲಿಲ್ಲ. ಅದರ ಬಗ್ಗೆ ನನಗೆ ಸಮಂಜಸವಾದ ಉತ್ತರ ಕೊಡಬೇಕು.

ಶ್ರೀ ವಸಂತ ಎ. ಸಾಲಿಯಾನ : ಮಾನ್ಯ ಉಪಾಧ್ಯಕ್ಷರೆ, ಕುಮಟಾ ತಾಲ್ಲೂಕಿಗೆ ರಾಷ್ಟ್ರೀಯ ಮೀನುಗಾರಿಕೆ ಕಲ್ಯಾಣ ಕಾರ್ಯಕ್ರಮದಲ್ಲಿ ಒಟ್ಟಿಗೆ 71 ಮನೆಗಳನ್ನು ಇಲ್ಲಿಯವರೆಗೆ ಮಂಜೂರಾತಿ ಮಾಡಿದ್ದೇವೆ. ಅದೇರೀತಿ ಮತ್ಸ್ಯಾಶ್ರಯ ಒಂದನೇ ಹಂತದಲ್ಲಿ 330 ಮನೆಗಳನ್ನು ಮಂಜೂರು ಮಾಡಿದ್ದೇವೆ. ಅದೇರೀತಿ ಮತ್ಸ್ಯಾಶ್ರಯ 2ನೇ ಹಂತದಲ್ಲಿ 70 ಮನೆಗಳು ಸೇರಿ ಒಟ್ಟು 471 ಮನೆಗಳನ್ನು ಈಗಾಗಲೇ ಮಂಜೂರು ಮಾಡಿದ್ದೇವೆ. ಅದೇರೀತಿ ಅವರ ಕುಮಟಾ ತಾಲ್ಲೂಕಿನಲ್ಲಿ ಸುಮಾರು 1003 ಅರ್ಜಿಗಳು ಬಾಕಿ ಇದೆ. ಈ ವರ್ಷದಲ್ಲಿ ಪ್ರೈಯಾರಿಟಿ ಬೇಸಿಸ್‌ನಲ್ಲಿ ನಾವು ಮಂಜೂರು ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಮೋಹನ್ ಕೆ. ಶೆಟ್ಟಿ : ಮಾನ್ಯ ಉಪಾಧ್ಯಕ್ಷರೆ, ಈ ಸರ್ಕಾರ ಬಂದಮೇಲೆ 90 ಮನೆಗಳು ಮಂಜೂರಾಗಿದೆ. ಆದರೆ ಹಣ ಬಿಡುಗಡೆಯಾಗಲಿಲ್ಲ. ಹಾಗೆ ಮಾನ್ಯ ಮಂತ್ರಿಗಳು ವಿದೇಶದ ಪ್ರವಾಸದ ಬಗ್ಗೆ ಹೇಳಲಿಲ್ಲ. ಇನ್ನು ಕರಾವಳಿ ಶಾಸಕರ ಸಭೆ ಕರೆದಾಗ ಉತ್ತರ ಕನ್ನಡ ಜಿಲ್ಲೆ ಶಾಸಕರನ್ನು ಸಭೆಗೆ ಕರೆಯಲಿಲ್ಲ. ಏಕೆ? ಅದಕ್ಕೆ ಉತ್ತರ ಕೊಡಬೇಕು.

ಶ್ರೀ ವಸಂತ ಎ. ಸಾಲಿಯಾನ : ಈಗಾಗಲೇ ನಮ್ಮ ರಾಜ್ಯಸರ್ಕಾರ ಐದು ಸಾವಿರ ಮನೆಗಳಿಗೆ ಮಂಜೂರಾತಿ ಕೊಟ್ಟಿದೆ. ಹುಡ್ಕೋದಿಂದ ಸಾಲ ಪಡೆದು ಅದಕ್ಕೆ ಗೌರ್ನಮೆಂಟ್ ಗ್ಯಾರಂಟಿ ಸಹ ಕೊಟ್ಟಿದೆ. ಆದಷ್ಟು ಬೇಗ ಹಣವನ್ನು ಜಿಲ್ಲಾ ಮಟ್ಟದಲ್ಲಿ ಆಯಾಯ ಕ್ಷೇತ್ರದಲ್ಲಿ 30 ಸಾವಿರ ರೂಪಾಯಿ ಕೊಡುವುದಕ್ಕೆ ಈಗಾಗಲೇ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮತ್ತೊಂದು ವಿಚಾರ ಮಾನ್ಯ ಮುಖ್ಯಮಂತ್ರಿಗಳ ಸಭೆಗೆ ಉತ್ತರ ಕನ್ನಡ ಜಿಲ್ಲೆಯ ಶಾಸಕರನ್ನು ಕಲಿಯಲಿಲ್ಲವೆಂದು ಹೇಳಿದರು. ನಾನು ಹೆಚ್ಚಾಗಿ ಕರಾವಳಿಯ ಮೂರು ಜಿಲ್ಲೆಯ ಹೆಚ್ಚಿನ ಎಲ್ಲಾ ವಿಧಾನಸಭಾ ಕ್ಷೇತ್ರದಲ್ಲಿ ಪ್ರವಾಸ ಮಾಡಿ ಮೀನುಗಾರಿಕಾ ಇಲಾಖೆಯಲ್ಲಿ ಏನು ತೊಂದರೆ ಇದೆ. ಯಾವರೀತಿ ಅಭಿವೃದ್ಧಿ ಮಾಡಬಹುದು ಎನ್ನುವ ರೀತಿಯಲ್ಲಿ ನೋಡುವುದಕ್ಕೆ ಸಂಚಾರ ಮಾಡಿ ಈಗಾಗಲೆ ಅದರ ವಿಚಾರವನ್ನು ತಿಳಿದುಕೊಂಡಿದ್ದೇನೆ.

ಶ್ರೀ ಮೋಹನ್ ಕೆ. ಶೆಟ್ಟಿ : ಮಾನ್ಯ ಮಂತ್ರಿಗಳು ವಿದೇಶ ಪ್ರವಾಸದ ವಿಚಾರ ಬಿಟ್ಟುಬಿಟ್ಟರು. ಅದನ್ನು ಹೇಳಲಿಲ್ಲ. ಇನ್ನು ಸಭೆ ಕರೆಯುವ ಬಗ್ಗೆ ಸ್ಪಷ್ಟ ಉತ್ತರ ಹೇಳಬೇಕು.

ಶ್ರೀ ವಸಂತ ಎ. ಸಾಲಿಯಾನ : ಮಾನ್ಯ ಮೋಹನ ಶೆಟ್ಟಿಯವರು ಕುಮಟಾ ತಾಲ್ಲೂಕಿನ ಬಗ್ಗೆ ಮಾತ್ರ ಕೇಳಿದ್ದು. ಅದರ ಬಗ್ಗೆ ಏನಾದರೂ ಪ್ರಶ್ನೆ ಇದ್ದರೆ, ಅದಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ವಿಶ್ವೇಶ್ವರ ಹೆಗಡೆಯವರು ಹೇಳಬಹುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಮಂತ್ರಿಗಳು ಈ ರೀತಿ ತಮ್ಮನ್ನು ತಾವು ಸೀಮುತಗೊಳಿಸುತ್ತಿರುವುದು ನಮಗೆ ಸಮಸ್ಯೆಯಾಗಿರುವುದು. ಈಗ ಮಾನ್ಯ ಮಂತ್ರಿಗಳು ಒಂದು

ಪ್ರಯತ್ನ ಮಾಡುತ್ತಿದ್ದಾರೆ. ಅದು ಸಮುದ್ರದ ಕೊರತೆ ಇರಲಿ ಮೀನುಗಾರಿಕೆ ಸಮಸ್ಯೆ ದೃಷ್ಟಿಯಿಂದ ಇರಲಿ. ಆದರೆ ನಮ್ಮ ವಿಚಾರ ಏನೆಂದರೆ ಕರಾವಳಿಯಲ್ಲಿ ಬರುವಂತಹ ಎಲ್ಲಾ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಡಲಿ. ನಮಗೆ ಏನು ಸಮಸ್ಯೆಯಾಯಿತು ಎಂದರೆ ಮಾನ್ಯ ಮೋಹನ ಶೆಟ್ಟಿಯವರು ಹೇಳಿದ ಹಾಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಒಂದು ಸಭೆ ಮಾಡಿದರು. ಇದಕ್ಕೆ ಉತ್ತರ ಕನ್ನಡ ಜಿಲ್ಲೆಯವರು ಎನು ತಪ್ಪು ಮಾಡಿದರು? ನಾವೆಲ್ಲಾ ಕರಾವಳಿಯ ಜಿಲ್ಲೆಯಿಂದ ಬರುವವರು.

ಶ್ರೀ ವಸಂತ ಎ. ಸ್ಸಾಲಿಯಾನ : ಇನ್ನು ಮುಂದೆ ಕರಾವಳಿ ಜಿಲ್ಲೆಯ ಎಲ್ಲಾ ಶಾಸಕರನ್ನು ಕರೆದು ನಾನು ಚಿಂತನೆ ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅದೊಂದು ಆಗಬೇಕು. ಈಗ ಮೀನುಗಾರರಿಗೆ ಮನೆಗಳನ್ನು ಇಷ್ಟು ಕಡಿಮೆ ಸಂಖ್ಯೆಯಲ್ಲಿ ಕೊಡುತ್ತಿದ್ದಾರೆ. ಈಗ ಕೊಟ್ಟಿರುವಂತಹ ಮನೆಗಳಿಗೆ ಕಳೆದ ಮೂರು ವರ್ಷದಿಂದ 25–30 ಸಾವಿರ ಕೊಡುವುದು. ಈಗ ದುಡ್ಡು ಇಲ್ಲ. ಅವರು ಹೇಳಿದ್ದನ್ನು ನಾನು ಕೇಳಿದ್ದೇನೆ. ಆದರೆ ಇಷ್ಟು ತಡ ಮಾಡಿದರೆ ಅವರು ಸಮುದ್ರದ ಪಕ್‌ಕದಲಲಿ ಇರುವವರು, ಬಡವರು, ದಿನನಿತ್ಯ ಮೀನು ಹಿಡಿದು ಜೀವನ ಮಾಡುವವರು. ಅವರಿಗೆ ಮನೆ ಕಟ್ಟುವುದಕ್ಕೆ ತೊಂದರೆ ಇದೆ. ನಬಾರ್ಡ್‌ನಿಂದ ರಸ್ತೆ ಮಾಡಿಸುತ್ತೇವೆ ಎಂದು ಹೇಳಿದರು. ಎರಡು ವರ್ಷವಾಯಿತು. ಈಗ ಏನೋ ಆರ್ಡರ್ ಕೊಡುತ್ತಿದ್ದೇವೆಂದು ಹೇಳಿದರು. ಕೆಲವರು ಈ ಆರ್ಡರ್ ಅಲ್ಲ. ಆ ಆರ್ಡರ್ ಅಲ್ಲವೆಂದು ಹೇಳುತ್ತಾ ಅದು ಮತ್ತೆ ತಡ. ಅವರಿಗೆ ಮಾರ್ಕೆಟ್ ವ್ಯವಸ್ಥೆ ಸರಿಯಾಗಿ ಇತ್ತಾ. ಮನೆಗಳ ಬಗ್ಗೆ ಅಷ್ಟೆ ಸೀಮಿತವಾದಂತಹ ಪ್ರಶ್ನೆ ಇದ್ದರೂ ಕೂಡ ಈ ಸದನದಲ್ಲಿ ಮೂರ್ನಾಲ್ಕು ಬಾರಿ ಮೀನುಗಾರಿಕೆಯ ಅನೇಕ ಸಮಸ್ಯೆಗಳನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸಿದ್ದೇವೆ. ಈ ಸಮುದ್ರದ ಕೊರೆತದಿಂದ ಹಿಡಿದು ಎಲ್ಲಾ ವಿಚಾರಗಳಿಗೆ ಮಾನ್ಯ ಸಚಿವರು ಸ್ಪಂದಿಸಬೇಕೆಂದು ಹೇಳುತ್ತೇನೆ.

ಉಪಾಧ್ಯಕ್ಷರು : ಅವರು ಏನೂ ಹೇಳುತ್ತಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅವರು ಇದಕ್ಕೆ ಏನೋ ಹೇಳುತ್ತಿದ್ದಾರೆ.

ಉಪಾಧ್ಯಕ್ಷರು : ಈಗ ಏನೂ ಹೇಳುವುದಿಲ್ಲ.

ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ : ಹಣ ಇಲ್ಲದೆ ಇರುವುದಕ್ಕೆ ಏನಾದರೂ ಹೇಳಬೇಕು. ಎರಡು ವರ್ಷದಿಂದ ಹಣ ಬಂದಿಲ್ಲವಲ್ಲಾ ಅದಕ್ಕೆ ಏನಾದರೂ ಉತ್ತರ ಹೇಳಬೇಕು.

ಉಪಾಧ್ಯಕ್ಷರು : ನಿಮ್ಮ ಪ್ರಶ್ನೆಯನ್ನು ಸಮಾಜಕಲ್ಯಾನ ಇಲಾಖೆಯಿಂದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ವರ್ಗಾಯಿಸಿದೆ. ಅಲ್ಲಿಂದ ಇನ್ನು ಉತ್ತರ ಬಂದಿಲ್ಲ ಬಂದನಂತರ ನಿಮಗೆ ತಿಳಿಸುತ್ತೇನೆ.

ಶ್ರೀ ಶಿವಳ್ಳಿ ಚನ್ನಬಸಪ್ಪ ಸತ್ಯಪ್ಪ : ಮಾನ್ಯ ಉಪಾಧ್ಯಕ್ಷರೆ, ನನಗೆ ಉತ್ತರವನ್ನು ಕೊಟ್ಟರೆ ಅನುಕೂಲವಾಗುತ್ತದೆ.

ಉಪಾಧ್ಯಕ್ಷರು : ಪ್ರಯತ್ನಿಸೋಣ,

ಶ್ರೀ ಶಿವಳ್ಳಿ ಚನ್ನಬಸಪ್ಪ ಸತ್ಯಪ್ಪ : ಮಾನ್ಯ ಉಪಾಧ್ಯಕ್ಷರೆ, ಈ ಪ್ರಶ್ನೆಗೆ ಉತ್ತರದ ಅವಶ್ಯಕತೆ ಇದೆ.

ಉಪಾಧ್ಯಕ್ಷರು : ನೀವು ಕೇಳಿರುವಂತಹ ಪ್ರಶ್ನೆ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟದ್ದು ಎಂದು ಕೇಳಿದ್ದೀರಿ, ಆದರೆ ಈ ಪ್ರಶ್ನೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ

ಇಲಾಖೆಗೆ ಸಂಬಂಧಪಟ್ಟಿದ್ದು, ಎಂದು ಅದನ್ನು ಅಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ಅಲ್ಲಿಂದ ಇದಕ್ಕೆ ಉತ್ತರ ಬರಬೇಕಾಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಕಳುಹಿಸಿರುವಂತಹ ಪ್ರಶ್ನೆ ಬಹಳ ಮಹತ್ವವಾದಂಥಾದ್ದು, ಬೇರೆ ಬೇರೆ ಇಲಾಖೆಗಳಲ್ಲಿ ನೇಮಕಾತಿಯ ವಯೋಮಿತಿಯನ್ನು ಬಹಳ ಕಡಿಮೆ ಮಾಡಿದ್ದಾರೆ. ನೇಮಕಾತಿಯಲ್ಲಿ ಪರೀಕ್ಷೆಗೆ ಅಪಿಯರ್ ಆಗುವಂಥಾದ್ದು, ಈ ವಯೋಮಿತಿಯನ್ನು ಕಡಿಮೆ ಮಾಡಿದ್ದಾರೆ. ಇದರ ಉದಾಹರಣೆ ಹೇಳಬೇಕೆಂದರೆ, ಪಿ.ಎಸ್.ಐ.ದ್ದು 24 ವರ್ಷಗಳಿಗೆ ಮಾಡಿದ್ದಾರೆ. ಈಗ ಈ ರೀತಿಯಾಗಿ ಬೇರೆ ಬೇರೆ ಇಲಾಖೆಯದ್ದು, ಇದೆ. ಇದು ಬಹಳ ಮಹತ್ವವಾದದ್ದು, ಇದನ್ನು ಚರ್ಚೆ ಮಾಡುವುದು ಇದೆ. ಆದುದರಿಂದ ಇದಕ್ಕೆ ಉತ್ತರವನ್ನು ಹೇಳುವ ಹಾಗೆ ತಾವು ಮಾಡಬೇಕು.

ಶ್ರೀ ಶಿವಳ್ಳಿ ಚನ್ನಬಸಪ್ಪ ಸತ್ಯಪ್ಪ : ಮಾನ್ಯ ಉಪಾಧ್ಯಕ್ಷರೆ, ಈ ವ್ಯವಸ್ಥೆಯಿಂದ ನಿರುದ್ಯೋಗ ಯುವಕರು ಹೆಚ್ಚಾಗುತ್ತಿದ್ದಾರೆ.

ಉಪಾಧ್ಯಕ್ಷರು : ಈಗ ಕೇಳಿದರೆ ರಿಪ್ಲೈ ಇಲ್ಲ.

ಶ್ರೀ ಶಿವಳ್ಳಿ ಚನ್ನಬಸಪ್ಪ ಸತ್ಯಪ್ಪ : ಮಾನ್ಯ ಉಪಾಧ್ಯಕ್ಷರೆ, ನಾನು ಕೇಳುವಂಥಾದ್ದು, ಹಿಂದುಳಿದ ವರ್ಗದಲ್ಲಿ ಬಡತನದಿಂದ ಇರುವಂತಹ ಅನೇಕ ವಿದ್ಯಾರ್ಥಿಗಳು ಕಷ್ಟಪಟ್ಟು ವಿದ್ಯಾಭ್ಯಾಸವನ್ನು ಮಾಡಿರುತ್ತಾರೆ.

ಉಪಾಧ್ಯಕ್ಷರು : ಮಾನ್ಯ ಶಿವಳ್ಳಿ ಚನ್ನಬಸಪ್ಪ ಸತ್ಯಪ್ಪನವರೆ, ಈಗ ತಾವು ಪ್ರಶ್ನೆಯನ್ನು ಕೇಳಿದ್ದೀರಿ, ಅದನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಕಳುಹಿಸಿದ್ದಾರೆ. ಅಲ್ಲಿಂದ ಉತ್ತರ ಬಂದಿಲ್ಲ.

ರಾಜ್ಯದಲ್ಲಿ ಜಾನುವಾರುಗಳಿಗೆ ಜೀವರಕ್ಷಕ ಲಸಿಕೆಗಳನ್ನು ಉಚಿತವಾಗಿ ಒದಗಿಸುವುದು

617 (5390) : ಶ್ರೀ ನಂಜುಂಡಸ್ವಾಮಿ ಜಿ.ಎನ್. (ಕೊಳ್ಳೇಗಾಲ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಾನುವಾರುಗಳಿಗೆ ಅವಶ್ಯವಿರುವ ಜೀವ ರಕ್ಷಕ ಲಸಿಕೆಗಳಿಗೆ ಶುಲ್ಕವನ್ನು ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಈ ರೀತಿ ಜೀವರಕ್ಷಕ ಲಸಿಕೆಗಳಿಗೆ ಶುಲ್ಕವನ್ನು ವಿಧಿಸುತ್ತಿರುವುದರಿಂದ ಬರಗಾಲ ಬೇಗೆಯಿಂದ ತತ್ತರಿಸುತ್ತಿರುವ ರೈತನಿಗಾಗುತ್ತಿರುವ ತೊಂದರೆಯನ್ನು ನಿವಾರಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಇ) ಈ ಹಿಂದಿನಂತೆಯೇ ಜೀವ ರಕ್ಷಕ ಲಸಿಕೆಗಳನ್ನು ಉಚಿತವಾಗಿ ಒದಗಿಸಲು ಉಂಟಾಗಿರುವ ತೊಂದರೆಯೇನು?

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಹೌದು

ಆ) 16-5-2002ರ ಸರ್ಕಾರಿ ಆದೇಶದ ಪ್ರಕಾರ ಜೀವ ರಕ್ಷಕ ಲಸಿಕೆಗಳಿಗೆ ಸಹಾಯಧನ ಪೂರಿತ ಕನಿಷ್ಠ ಬೆಲೆಯನ್ನು ನಿಗದಿಪಡಿಸಲಾಗಿದೆ. ರೈತರಿಗೆ ತೊಂದರೆಯಾಗುವಷ್ಟು ಬೆಲೆಯನ್ನು ನಿಗದಿಪಡಿಸಿಲ್ಲ.